

ಒಂದೇ ಮಡಿಕೆಯ ನಾಲ್ಕಡಿ ಉದ್ದದ ಕಪ್ಪು ಚೂಪುಛತ್ರಿ ಎಲ್ಲರ ಮನೆಯಲ್ಲಿರುತ್ತಿತ್ತು. ಗೆಳತಿಯರ ಮನೆಯಲ್ಲಿ ಎರಡು ಮೂರು ಛತ್ರಿಯಿದ್ದರಿಂದ ಒಂದನ್ನು ಮಳೆಯಲ್ಲಿ ಆಡಲು ತರುತ್ತಿದ್ದರು. ಆಗೆಲ್ಲಾ ಅವರ ಅಂಗಳದಲ್ಲೇ ನನ್ನ ವಾಸ್ತವ್ಯ... ಸುರಿವ ಮಳೆಯಲ್ಲಿ ಛತ್ರಿ ಬಿಡಿಸಿ ನಿಂತು ಗಿರ್ರನೆ ತಿರುಗಿಸಿದಾಗ ಅಂಚಿನಿಂದ ಮಳೆಯ ನೀರು ವೃತ್ತಾಕಾರವಾಗಿ ಚಿಮ್ಮುತ್ತಿದ್ದದ್ದನ್ನು ನೋಡುವುದೂ ಆಟವೇ... ಸರದಿಯಲ್ಲಿ ಕಾದು ನಿಂತು ಕೊಡೆ ಪಡೆದು ನಾವೂ ಆಡುತ್ತಿದ್ದೆವು. ಅಸೂಯೆಯಿರದ ನಮ್ಮಲ್ಲಿ ಕೋಳೀಜಗಳ ಖಂಡಿತ ಇತ್ತು, ಆದರೆ ದೊಡ್ಡವರ ತನಕ ದೂರು ಒಯ್ಯದೇ ನಾವ್‌ನಾವೇ ಬಗೆಹರಿಸಿಕೊಳ್ಳುತ್ತಿದ್ದೆವು. ಜೋರು ಗಾಳಿಗೆ ಛತ್ರಿಯನ್ನು ಮುದ್ದಾಂ ಹಿಡಿದು ಮೇಲ್ಮುಖವಾಗಿ ಬುಟ್ಟಿಯಂತಾಗಿಸಿ ಪದೇ ಪದೇ ಸರದಿಯಲ್ಲಿ ಪುನರಾವರ್ತಿಸಿ ಅದನ್ನು ಶಿಥಿಲಗೊಳಿಸುತ್ತಿದ್ದೆವು. ಹಾಗೆ ಮಾಡುವ ಭರದಲ್ಲಿ ಮೈಯೆಲ್ಲಾ ತೋಯುತ್ತಿತ್ತು. ನಮಗೆ ಬೇಕಾದದ್ದೂ ಅದೇ!

ಮನಸೋ ಇಚ್ಛೆ ಮಳೆಯಲ್ಲಿ ಆಡಿ ನೆನೆದ ಫ್ರಾಕಿನ ತುದಿ ಒಗ್ಗೂಡಿಸಿ ಹಿಂಡಿ ನೀರು ತೆಗೆದು ಹಿಂದಿರುಗುವಾಗಲಷ್ಟೇ ನೆನೆಯಬಾರದೆಂದು ಕಣ್ಣರಳಿಸಿ ತಾಕೀತು ಮಾಡಿದ್ದ ಆಯಿಯ ಮುಖ ನೆನಪಾಗಿ ಮನೆ ಸೇರಲು ಆದಷ್ಟೂ ತಡ ಮಾಡುವುದಿತ್ತು. ನಡುಗುತ್ತಲೇ ಮನೆ ಸೇರಿ 'ಆಯೀ... ಛತ್ರಿ ಹಿಡ್ಕಂಡು ಗೇಟು ಹಾಕೂಲೆ ಹೋದಾಗ ಗಾಳಿ ಜೋರು ಬಂದ್ಬಿಡ್ತು... ಹಿಡ್ಕಂಡ ಛತ್ರಿ ಹಾರಿ ಬಿದ್ದು ನೆನೆಯೂ ಹಂಗಾತು...' ತಲೆಯಿಂದ ಇಳಿದ ನೀರನ್ನೇ ಕಣ್ಣಲ್ಲಿ ತುಂಬಿಕೊಂಡು ಬಾಯಲ್ಲಿ ಬೆರಳಿಟ್ಟರೆ ಕಚ್ಚಲೂ ಬಾರದ ಮುಗ್ಧತನವನ್ನು ಮುಖದಲ್ಲಿ ತುಂಬಿಕೊಂಡು ಒದ್ದೆಯಾದದ್ದಕ್ಕೆ ಪಿಳ್ಳೆ ನೆವವನ್ನ ಆಯೀ ಕೇಳುವ ಮೊದಲೇ ಹೇಳಿ ಮೈ ಹಿಡಿಯಾಗಿಸಿ ಶರಣಾಗುತ್ತಿದ್ದ ನನ್ನ ಸ್ಥಿತಿ ಬಾಲ ಮುದುರಿ ನಿಂತ ಕುನ್ನೀಮರಿಯಂತಿರುತ್ತಿತ್ತು. ಆಯಿಯೋ ಹುಬ್ಬುಗಂಟಿಕ್ಕಿ ಗೊಣಗುತ್ತಲೇ ಪಂಜಿಯಿಂದ ತಲೆಯನ್ನು ಒರೆಸುತ್ತಿದ್ದಾಗ ಒತ್ತಿ ಬಂದ ಸೀನನ್ನು ತಡೆಹಿಡಿಯಲು ಹರಸಾಹಸ ಪಡುತ್ತಿದ್ದೆ, ಸೀನಿದರೆ ಏನಾಗುತ್ತದೆಂದು ಗೊತ್ತಿತ್ತು. ಆದರೆ ತುಂಟ ಸೀನಿನ ತಂಟೆಯದ್ದೇ ಮೇಲುಗೈಯಾಗಿ ಹೊರಬಿದ್ದ 'ಆಕ್ಷೀ...!' ಆರ್ಭಟಕ್ಕೆ ಸಮನಾಗಿ ತಲೆಯೋ ಆಕಾಶದೆಡೆಯಿಂದ ಪಾತಾಳದೆಡೆ ಥಟ್ಟನೆ ತೂಗಿದಾಗ ತೊಪ್ಪೆಯಾದ ಕಡ್ಡೀ ಜಡೆಗಳೂ ದಿಕ್ಕುದೆಸೆಯೆನ್ನದೇ ಸಾಥ್ ನೀಡುತ್ತಿದ್ದವು. ಆಯಿಯ ಮುಖಕ್ಕೆಲ್ಲಾ ನೀರು ಸಿಡಿದು ಪಂಜಿ ಹಿಡಿದ ಕೈಯಿಂದಲೇ ತಲೆಗೆ ಮೊಟಕಿ ಮಂತ್ರಾಕ್ಷತೆ ಹಾಕುತ್ತಾ ಧುಮುಗುಡುತ್ತಿದ್ದಳು. ಆಗೆಲ್ಲಾ ಮಳೆಯಲ್ಲಿ ನೆನೆದದ್ದೂ ಸಾಕು ಬೈಸಿಕೊಳ್ಳುತ್ತಾ ಮೊಟಕಿಸಿಕೊಂಡದ್ದೂ ಸಾಕೆನ್ನಿಸಿತ್ತಾದರೂ ಮತ್ತೆ ಮಳೆಯಲ್ಲಿ ಮಿಂದೇಳುವಾಗ ಬಯ್ಗುಳ, ಮೊಟಕು, ಸೀನುಗಳ ಭಯ ಬಾಧಿಸದೇ ಲಗಾಮಿಲ್ಲದ ಮುಕ್ತ ಕೇಳಿ ನಮ್ಮದಾಗುತ್ತಿತ್ತು.

ಕಲಿಯುವ ಪ್ರಾರಂಭಿಕ ಹಂತದಲ್ಲಿ ನನ್ನ ಶಾಲೆ 'ತಟ್ಟೀಶಾಲೆ' ಎಂದೇ ಗುರುತಿಸಲ್ಪಟ್ಟಿತ್ತು. ಅದೋ ಮಳೆಗಾಲದಲ್ಲಿ ಸೋರಿದಾಗಲೆಲ್ಲ ಪಾಟೀ, ಬಳಪಗಳಿಗೆ ಇನ್ನಿಲ್ಲದ ವಿಶ್ರಾಂತಿ, ಬೆಚ್ಚನೆಯ



ಚೀಲದ ಗೂಡು ಸೇರಿಬಿಡುತ್ತಿದ್ದವು. ಮತ್ತಾಗ ನೀತಿಕಥೆ, ಭಕ್ತಿಗೀತೆ, ಜಾನಪದ ಗೀತೆಗಳಿಗೆ ಚಾಲನೆ ದೊರಕಿ ಮನರಂಜನೆಯಾಗುತ್ತಿದ್ದದ್ದೇ ಮಳೆಗಾಲದ ಶಾಲೆಯೆಂದರೆ ಅಚ್ಚುಮೆಚ್ಚಾಗಲು ಕಾರಣವಾಗಿತ್ತು. ಇನ್ನು ಆಲಿಕಲ್ಲಿನ ಮಳೆ ಬಂದರಂತೂ ಅದರ ಖದರ್ರೇ ಬೇರೆ. ಮಳೆಯಲ್ಲಿ ನೆನೆಯುತ್ತಲೇ ಬಟ್ಟಲಲ್ಲಿ ತುಂಬುತ್ತಾ ಬಾಯೊಳಗೂ ಇಟ್ಟುಕೊಂಡು ಸೊರ್ರನೆ ಸೀಪುತ್ತಿದ್ದ ಆ ದಿನಗಳ ನೆನಪಿನ ಮುದದಲ್ಲಿ ವಿಹರಿಸುತ್ತಲೇ ಅಡುಗೆಯ ಯಾಂತ್ರಿಕತೆಯಲ್ಲಿ ತೊಡಗಿದ್ದೆ. ನನ್ನ ಮನೋಭೀಷ್ಟೆಗೆ ವರುಣದೇವ ತಥಾಸ್ತು ಎಂದದ್ದರ ಕುರುಹಾಗಿ ಮೋಡ ಕವಿದು ಕಪ್ಪಾದದ್ದೂ ಅಲ್ಲದೆ ಗುಡುಗು ಸಿಡಿಲಿನ ಆರ್ಭಟವೂ ಕೇಳಿಸಿತ್ತು! ಮಳೆಯ ದಪ್ಪ ಹನಿ ರಪರಪನೆ ಬೀಳತೊಡಗಿದಾಗ ಮಾಡುತ್ತಿದ್ದ ಕೆಲಸವನ್ನಲ್ಲೇ ಬಿಟ್ಟು ಒಣಹಾಕಿದ್ದ ಬಟ್ಟೆ ತರಲು ಮಹಡಿಗೆ ಓಡಿದ್ದೆ.

ಗಾಳಿ, ಮಳೆಯ ರಭಸದೊಟ್ಟಿಗೆ ಆಲೀಕಲ್ಲೂ ಬೀಳತೊಡಗಿದಾಗ ಕಾಡುತ್ತಿದ್ದ ಅಲರ್ಜಿಯನ್ನೂ ಮರೆತು ತಲೆಯ ಮೇಲೊಂದು ಟವಲ್ಲು ಹೊಚ್ಚಿಕೊಂಡು ಅಂಗಳಕ್ಕಿಳಿದು ಆಲಿಕಲ್ಲು ಆರಿಸುವ ಸಂಭ್ರಮದ ತನ್ಮಯತೆಯಲ್ಲಿ ಮಾಗಿದ ವಯಸ್ಸು ಮರೆತಂತಾಗಿ ಹರೆಯವುಕ್ಕಿತ್ತು! ಹಿತ್ತಲಲ್ಲಿ ಮುಸುರೆ ತೊಳೆಯುತ್ತಿದ್ದ ಕೆಲಸದ ಹುಡುಗಿ ಭಾಗ್ಯಳೂ ಮಾಡುತ್ತಿದ್ದ ಕೆಲಸವನ್ನು ಅರ್ಧಕ್ಕೇ ಬಿಟ್ಟು ಜೊತೆಗೂಡಿದಾಗಲಂತೂ ಬಾಲ್ಯವದು ಮತ್ತೆ ಮರುಕಳಿಸಿದಂತಾಗಿ ಕವಿ ಜಿ.ಪಿ. ರಾಜರತ್ನಂ ಅವರ "ಆಲಿಕಲ್ಲಿನ ಮಳೆಯು ಬಂದಿದೆ, ಮಕ್ಕಳೆಲ್ಲಾ ಬನ್ನಿರಿ; ನೆನೆಯಬೇಡಿ ತಲೆಯ ಮೇಲೆ ಗೋಣಿಚೀಲವ ತನ್ನಿರಿ... ಕರಗಿಹೋಗುವ ಮೊದಲೇ ಹೆಕ್ಕಿ ಹಾಕಿಕೊಳ್ಳಿರಿ ಬಾಯಿಗೆ..." ಎಂದು ಗುನುಗುತ್ತಲೇ ಬಾಯಲ್ಲೊಂದು ಆಲಿಕಲ್ಲನ್ನು ಹಾಕಿಕೊಂಡು ಸಶಬ್ದವಾಗಿ ಹೀರಿದ್ದೆ!

ಪ್ರತಿಕ್ರಿಯಿಸಿ: **feedback@sudha.co.in**